~ಮುಂಜಾನೆ ಮಾತು~
ಬರುವಾಗ ತರದೇ, ಹೋಗುವಾಗ ತೆಗೆದುಕೊಂಡು ಹೋಗದೇ ಇರುವ ನಾವು ಮಧ್ಯದ ಅವಧಿಯನ್ನು ಸಾರ್ಥಕ ಕೆಲಸಕ್ಕೆ ಬಳಸಿಕೊಳ್ಳೋಣ.

ವಿಜಯವಾಣಿ
ಕನ್ನಡಿಗರ ಧ್ವನಿ
ನಂ.1 ಕನ್ನಡ ದಿನಪತ್ರಿಕೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 6 ● ಸಂಚಿಕೆ 170
vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 18 ಸೆಪ್ಟೆಂಬರ್ 2017 | ಸೋಮವಾರ

## ಸಹ್ಯಾದ್ರಿಯಲ್ಲಿ ಜಿಎಸ್‌ಟಿ ಕಾರ್ಯಾಗಾರ



ಶ್ರೇಯಸ್ ಕೆ.ಎಂ

ಮಂಗಳೂರು: ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನ ಎಂಬಿಎ ವಿದ್ಯಾರ್ಥಿಗಳಿಗೆ ಜಿಎಸಿಟಿ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಸರಕು ಮತ್ತು ಸೇವಾ ತೆರಿಗೆ ಸಹಾಯಕ ಆಯುಕ್ತ ಶ್ರೇಯಸ್ ಕೆ.ಎಂ ನಡೆಸಿಕೊಟ್ಟರು. ಸರಕು ಮತ್ತು ಸೇವಾ ತೆರಿಗೆ ಪ್ರಾಮುಖ್ಯತೆ, ಜಿಎಸ್‌ಟಿ ಅನುಷ್ಠಾನದಲ್ಲಿ ಸವಾಲುಗಳು ಮತ್ತು ತೆರಿಗೆ ದರಗಳ ಎಲ್ಲ ಪ್ರಕಾರಗಳನ್ನೂ ವಿವರಿಸಿದರು. ಪ್ರತಿಯೊಬ್ಬ ನಾಗರಿಕರೂ ಒಂದು ಉತ್ತಮ ನಾಗರಿಕ ಸಮಾಜವನ್ನು ಬಯಸುತ್ತಾರೆ. ಆದ್ದರಿಂದ ಸರ್ಕಾರ ತೆರಿಗೆಯನ್ನು ಸಂಗ್ರಹಿಸುತ್ತದೆ. ಇತರ ದೇಶಗಳಿಗಿಂತ ಭಿನ್ನವಾಗಿ ಭಾರತದಲ್ಲಿ ತೆರಿಗೆ ಸಂಗ್ರಹಿಸುವ ಮಹತ್ವವನ್ನು ಉಲ್ಲೇಖಿಸಿದರು.

ವಾರ, ಸೆಪ್ಟೆಂಬರ್ 18, 2017 | ಮಂಗಳೂರು | ₹ 5.00 | ಸಂಪುಟ 19 | ಸಂಚಿಕೆ 259 | ಪುಟ 18 + 4 + 2 ● www.prajavani.net /prajavani.net

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಟ ಅಂಕ
ಭಾರತದ ಫುಟ್‌ಬಾಲ್ ಲೋಕದಲ್ಲಿ ಬಿಎಫ್‌ಸಿ ಮೈಲುಗಲ್ಲುಗಳನ್ನು ಸ್ಥಾಪಿಸಿದೆ.

ನಿತೀಶ್ ಮೂಲೆಗುಂಪಿಗೆ ಷಾ ರಣತಂತ್ರ 8 | ಗೋರಖಪುರ ಆಸ್ಪತ್ರೆಯಲ್ಲಿ ಮಕ್ಕಳ ಸಾವು
ಕ್ರಿಕೆಟ್: ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ ಜಯ 12 | ಆಮ್ಲಜನಕ ಪೂರೈಕೆದಾರನ ಬಂಧನ 8



ಸಹ್ಯಾದ್ರಿ ಕಾಲೇಜ್ ನಲ್ಲಿ ಎಂಜಿನಿಯರ್ಸ್ ಡೇ ಸಂದರ್ಭ ಕೇಂಬ್ರಿಜ್ ಶಾಲೆಯ ವಿದ್ಯಾರ್ಥಿಗಳು ಭೇಟಿ ನೀಡಿದರು. ಪ್ರಜಾವಾಣಿ ಚಿತ್ರ

## ಸಹ್ಯಾದ್ರಿಯಲ್ಲಿ ಎಂಜಿನಿಯರ್ಸ್ ಡೇ ಆಚರಣೆ

ಮಂಗಳೂರು: ಸಹ್ಯಾದ್ರಿ ಕಾಲೇಜ್ ನಲ್ಲಿ ಎಂಜಿನಿಯರ್ಸ್ ಡೇ ಸಂದರ್ಭ ಸರ್. ಎಂ. ವಿಶ್ವೇಶ್ವರಯ್ಯ ಅವರಿಗೆ ಗೌರವಾರ್ಪಣೆ ನಡೆಯಿತು. ಈ ಸಂದರ್ಭ ಕೇಂಬ್ರಿಜ್ ಇಂಟರ್ ನ್ಯಾಷನಲ್ ಸ್ಕೂಲ್‌ನ 70 ಮಂದಿ ವಿದ್ಯಾರ್ಥಿಗಳು ಸಹ್ಯಾದ್ರಿ ಕ್ಯಾಂಪಸ್‌ಗೆ ಭೇಟಿ ನೀಡಿ ಪ್ರಾಂಶುಪಾಲರು ಮತ್ತು ಹಿರಿಯ ಬೋಧಕ ವರ್ಗ ಹಾಗೂ ವಿದ್ಯಾರ್ಥಿಗಳ ಜೊತೆ ಸಂವಹನ ನಡೆಸಿದರು.

ಕಾಲೇಜಿನ ವಿವಿಧ ವಿಭಾಗಗಳಿಗೆ ಭೇಟಿ ನೀಡಿ 'ಡ್ರೀಮರ್' ತಂಡದೊಂದಿಗೆ ವಿಮಾನ ಯಾನ ಮಾದರಿ ವಿನ್ಯಾಸ ಮತ್ತು ವಾಯುಯಾನ ಪ್ರದರ್ಶನವನ್ನು ನೋಡಿದರು.

ಪ್ರಾಂಶುಪಾಲ ಉಮೇಶ್ ಎಂ. ಭೂಶಿ ಇದ್ದರು.



ಆಸೀಸ್ ವಿರುದ್ಧ ಮೊದಲ ಏಕದಿನ: ಪಾಂಡ್ಯ ಅರ್ಧಶತಕ ಭಾರತಕ್ಕೆ ಭರ್ಜರಿ ಜಯ 11

ಉಗ್ರ ಅಜರ್ ವಿರುದ್ಧ ನ್ಯಾಯ ಸಿಗುವವರೆಗೂ ಸುಮ್ಮನೆ ಕೂರಲ್ಲ 3

ರಾಹುಲ್, ಸೋನಿಯಾ, ಯಚೂರಿ ವಿರುದ್ಧ ಮಾನನಷ್ಟ ದಾವೆ 3

ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿಯಡಿ ತನ್ನಿ 10

ಮಂಗಳೂರು
ಸೋಮವಾರ
18 ಸೆಪ್ಟೆಂಬರ್ 2017
ಹೇಮಲಂಬಿ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ,, ನಕ್ಷತ್ರ : ಮಘೆ
ಬೆಲೆ ₹ 4.00

# ಹೊಸ ದಿಗಂತ HD

ಸಂಪುಟ 39, ಸಂಚಿಕೆ 172, ಪುಟಗಳು 12+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2015-17 Posted at kodialbail

## ಸಹ್ಯಾದ್ರಿಯಲ್ಲಿ ಜಿ.ಎಸ್.ಟಿ ಕಾರ್ಯಾಗಾರ

# ಭಾರತದಲ್ಲಿ ಭಿನ್ನವಾಗಿ ತೆರಿಗೆ ಸಂಗ್ರಹ

ದಿಗಂತ ವರದಿ: ಮಂಗಳೂರು, ಸೆ.17



ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ ಎಂಬಿಎ ವಿದ್ಯಾರ್ಥಿಗಳಿಗೆ ಜಿಎಸ್‌ಟಿಯ ಬಗ್ಗೆ ಕಾರ್ಯಾಗಾರವನ್ನು ಸರಕು ಮತ್ತು ಸೇವಾ ತೆರಿಗೆಯ ಸಹಾಯಕ ಕಮಿಷನರ್ ಶ್ರೇಯಸ್ ಕೆ. ಎಂ. ನಡೆಸಿಕೊಟ್ಟರು.

ಜಿಎಸ್ಟಿ ಅನುಷ್ಠಾನದಲ್ಲಿ ಸವಾಲುಗಳು ಮತ್ತು ತೆರಿಗೆ ದರಗಳ ಎಲ್ಲಾ ಪ್ರಕಾರಗಳನ್ನೂ ವಿವರಿಸಿದ ಅವರು, ಪ್ರತಿಯೊಬ್ಬ ನಾಗರಿಕರೂ ಒಂದು ಉತ್ತಮ. ನಾಗರಿಕ ಸಮಾಜವನ್ನು ಬಯಸುತ್ತಾರೆ, ಆದ್ದರಿಂದ ಸರ್ಕಾರವು ತೆರಿಗೆಯನ್ನು ಸಂಗ್ರಹಿಸುತ್ತದೆ. ದೇಣಿಗೆ ಸಂಗ್ರಹಿಸುವ ಇತರ ದೇಶಗಳಿಗಿಂತ ಭಿನ್ನವಾಗಿ ಭಾರತದಲ್ಲಿ ತೆರಿಗೆ ಸಂಗ್ರಹಿಸುವ ಮಹತ್ವವನ್ನು ಉಲ್ಲೇಖಿಸಿದರು.

ರಾಷ್ಟ್ರವನ್ನು ರಕ್ಷಿಸುವ ಸರಕಾರದ ಪ್ರಮುಖ ಖರ್ಚು ಭಾರತೀಯ ಸೇನೆಯಲ್ಲಿದೆ ಮತ್ತು ಆದ್ದರಿಂದ ಅದು ತೆರಿಗೆ ನಮ್ಮ ನೈತಿಕ ಜವಾಬ್ದಾರಿಯಾಗಿದೆ ಎಂದು ಅವರು ಹೇಳಿದರು. ಒಬ್ಬ ವ್ಯಕ್ತಿಯಿಂದ ಪಡೆದ ಹಣದ ಕೆಲವು ಭಾಗಕ್ಕೆ ಸರ್ಕಾರವು ಅಧಿಕಾರವನ್ನು ಹೊಂದಿದೆ. ಪ್ರಸ್ತುತ ಜಿಎಸ್ಟಿ ರಚನೆಯು 'ತೆರಿಗೆಯನ್ನು ತೆಗೆದುಕೊಂಡು ಅದನ್ನು ಯಾರ ಬಳಿ ಇಲ್ಲವೋ ಅವರಿಗೆ ವಿತರಿಸಿ' ಎಂದು ಕೇಂದ್ರೀಕರಿಸುತ್ತದೆ.

ಜಿಎಸ್ಟಿಗೆ ನೋಂದಾಯಿಸಲು ಜ್ಞಾನವನ್ನು ಹೇಗೆ ಬಳಸುತ್ತಾರೆ ಎಂಬ ಬಗ್ಗೆ ವಿದ್ಯಾರ್ಥಿಗಳ ಬಗ್ಗೆ ಅವರು ಜಾಗೃತಿ ಮೂಡಿಸಿದರು.

ರಿಜಿಡ್ ಪಿ.ವಿ.ಸಿ.
ಶ್ರೀ ಕೃಷ್ಣ ಪೈಪ್
ಕರ್ಕಿ, ಹಟ್ಟಿಯಂಗಡಿ
ಕುಂದಾಪುರ Tq, ಉಡುಪಿ Dist,
Ph: (08254) 271261, 271361 (R).
264361, 264444 (Factory).

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಸೋಮವಾರ, ಸೆಪ್ಟಂಬರ್ 18, 2017 ಬೆಲೆ: ₹ 5-00 ವಿದೇಶ ಬೆಲೆ: ₹ 6-00

CENTRAL LIBRARY

An exclusi
model sto
Titan watc
now open
at Kundap

# ವೃತ್ತಿಪರ ಕಾಲೇಜು: ಹೆಚ್ಚುವರಿ ಶುಲ್ಕ ವಾಪಸ್

## ಪ್ರವೇಶ ಮೇಲ್ವಿಚಾರಣ ಸಮಿತಿ ಶಿಫಾರಸು

ಬೆಂಗಳೂರು, ಸೆ. 17: ರಾಜ್ಯದ ವೃತ್ತಿಪರ ಕಾಲೇಜಿನ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕ ಪಡೆದ ಕಾಲೇಜುಗಳು ವಾರ್ಷಿಕ ಶೇ. 18ರಷ್ಟು ಬಡ್ಡಿಯೊಂದಿಗೆ ಹೆಚ್ಚುವರಿ ಹಣವನ್ನು ತಿಂಗಳೊಳಗೆ ವಾಪಸ್ ನೀಡುವಂತೆ ಪ್ರವೇಶ ಮೇಲ್ವಿಚಾರಣ ಸಮಿತಿ ಶಿಫಾರಸು ಮಾಡಿ ಸರಕಾರಕ್ಕೆ ವರದಿ ಸಲ್ಲಿಸಿದೆ.

ವೃತ್ತಿಪರ ಕಾಲೇಜಿನ ಪ್ರವೇಶ ನಿಯಂತ್ರಣಕ್ಕೆ ಸಂಬಂಧಿಸಿದಂತೆ ನಿವೃತ್ತ ಹೈಕೋರ್ಟ್ ನ್ಯಾ। ಆನಂದ ಭೈರಾರೆಡ್ಡಿ ನೇತೃತ್ವದ ಸಮಿತಿ ರಚನೆ ಮಾಡಲಾಗಿತ್ತು. ಆದರೆ, ಈ ಸಮಿತಿಗೆ ಹೆಚ್ಚುವರಿ ಶುಲ್ಕ ವಸೂಲಿ ಮಾಡುವ ಅಧಿಕಾರ ನೀಡಿಲ್ಲ. ಶಿಫಾರಸಿನ ವರದಿಯನ್ನು ಸರಕಾರ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗೆ ಸಲ್ಲಿಸಿದೆ. ಸರಕಾರವು ಈ ವರದಿ ಅನುಷ್ಠಾನ ಮಾಡಿದರೆ, ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ಪಾವತಿ ಸಿರುವ ಶುಲ್ಕ ಬಡ್ಡಿ ಸಮೇತ ಸಿಗಲಿದೆ.

15 ವೈದ್ಯಕೀಯ, 15 ದಂತ ವೈದ್ಯಕೀಯ ಕಾಲೇಜುಗಳ ಪಟ್ಟಿ ಸಿದ್ಧಪಡಿಸಿದೆ. ಯಾವುದಕ್ಕೆ ಎಷ್ಟು ಶುಲ್ಕ ಪಡೆಯಲಾಗುತ್ತಿದೆ ಎಂಬ ಮಾಹಿತಿ ಪ್ರಕಟಿಸಿದ್ದು, ವಸೂಲಿ ಮಾಡುವ ಜವಾಬ್ದಾರಿಯನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿಗೆ ನೀಡಿದೆ.

**2017-18ನೇ ಸಾಲಿಗೆ ಖಾಸಗಿ ಕಾಲೇಜಿನ ಸರಕಾರಿ ಕೋಟಾದ ಎಂಜಿನಿಯರಿಂಗ್ ಸೀಟುಗಳಿಗೆ 50,500 ಹಾಗೂ 56,000 ರೂ. ನಿಗದಿ ಪಡಿಸಿದೆ. ಖಾಸಗಿ ಕಾಲೇಜಿನ ಸರಕಾರಿ ಕೋಟಾದ ವೈದ್ಯಕೀಯ 77,000 ರೂ., ಖಾಸಗಿ ಸೀಟು 6,32,500 ರೂ., ಬಿ-ಫಾರ್ಮಾ, ಫಾರ್ಮಾ-ಡಿ ಕೋರ್ಸ್‌ಗಳಿಗೆ 21,430 ರೂ.ನಿಗದಿ ಪಡಿಸಿದೆ. ಆದರೆ, ಬಹುತೇಕ ಕಾಲೇಜುಗಳು ಒಬ್ಬೊಬ್ಬ ವಿದ್ಯಾರ್ಥಿಯಿಂದ 15 ಸಾವಿರದಿಂದ ಒಂದು ಲಕ್ಷದ ತನಕವೂ ಹೆಚ್ಚುವರಿ ಶುಲ್ಕ ಪಡೆದಿರುವ ಮಾಹಿತಿ ಇದೆ.**